ಇ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಡಲು ಆದ್ಯತೆ ಮೇಲೆ ಕಾರ್ಯನಿರ್ವಹಿಸಲು ಕೆ ಪಿ ಟಿ ಸಿ ಎಲ್ ಗೆ ಸೂಚಿಸಲಾಗುವುದೇ?

ಉತ್ತರ

ಅ) ಹೌದು ನಿಗಮದ ಗಮನಕ್ಕೆ ಬಂದಿದೆ

ಆ ಮತ್ತು ಇ) ಮಲ್ಲಾಪುರ ಗ್ರಾಮದಲ್ಲಿ ಒಂದು 66 11 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು ಈ ಯೋಜನೆಗೆ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್ 2001ರಲ್ಲಿ ತನ್ನ ಅನುಮೋದನೆಯನ್ನು ನೀಡಿರುತ್ತದೆ ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಕಾರ್ಪೊರೇಟ್ ಕಛೇರಿಯ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ, ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಬೆಳ್ತಂಗಡಿ ತಾಲ್ಲೂಕಿನಲ್ಲಿ ರೈತರ ನೀರಾವರಿ ವಿದ್ಯುತ್ ಪಂಪ್ ಸೆಟ್‌ಗಳಿಗೆ ವಿದ್ಯುತ್ ನರಬರಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 156(214)

ಸದಸ್ಯರ ಹೆಸರು ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ರೈತರ ನೀರಾವರಿ ವಿದ್ಯುತ್ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು? ಅರ್ಜಿ ಕೊಟ್ಟು ಎಷ್ಟು ದಿನಗಳಲ್ಲಿ ವಿದ್ಯುತ್ ನರಬರಾಜು ಮಾಡಲಾಗುತ್ತದೆ

ಆ ದಕ್ಷಿಣ ಕನ್ನಡ ಜಿಲ್ಲೆಯ ರೈತರ ವಂಪ್‌ಸೆಟ್‌ಗಳಿಗೆ ನಿಗದಿಪಡಿಸಿರುವ ಶುಲ್ಕವು ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೆಚ್ಚುವರಿ ಶುಲ್ಕ ಪಾವತಿಸದೆ ಇರುವ ಕೃಷಿಕರಿಗೆ ವಿದ್ಯುತ್ ನರಬರಾಜು ಕಡಿತಗೊಳಿಸುವುದಾಗಿ ಇಲಾಖೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ರೈತರ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮವೇನು ತಿಳಿಸುತ್ತಿರುವುದು?

ಇ ಬಡ ಕೃಷಿಕರಿಗೆ ದಿನಕ್ಕೆ ಎಷ್ಟು ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಅನ್ನು ಸರಬರಾಜು ಮಾಡಲಾಗುವುದು?

ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಕರ ಪಂಪ್‌ಸೆಟ್‌ಗಳಿಗೆ ನಿಯಮಿತವಾಗಿ ವಿದ್ಯುತ್ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು?

ಉತ್ತರ

ಆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ 31-12-2001ರ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ರೈತರ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 6875 ಬೆಳ್ತಂಗಡಿ ತಾಲ್ಲೂಕು ಬೂದು ತಾಲ್ಲೂಕು ಎಂದು ಘೋಷಿಸಲಾಗಿರುತ್ತದೆ ಸರ್ಕಾರದ ಆದೇಶದ ತಿನ್ಪಯ ಕಪ್ಪು ಮತ್ತು ಬೂದು ತಾಲ್ಲೂಕುಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣವನ್ನು ಆಗಸ್ಟ್-2001ರಿಂದ ಕೈಗೊಳ್ಳಲಾಗಿದ್ದು, ಈ ಕೆಳಕಂಡಂತೆ ತಿಳಿಸಿರುವ ರೀತಿಯಲ್ಲಿ ಆದ್ಯತೆಯನ್ನು ನೀಡಲಾಗಿರುತ್ತದ

1 ದಿನಾಂಕ 17-4-1997ಕ್ಕಿಂತ ಮುಂಚಿತವಾಗಿ ವಿದ್ಯುತ್ ಮಂಜೂರಾತಿಯಾಗಿ ಕಾರ್ಯಾದೇಶ ನೀಡಿದ್ದು ವಿದ್ಯುತ್ ಪೂರೈಸದೇ ಬಾಕಿ ಇರುವ ಎಲ್ಲಾ ನೀರಾವರಿ ಪಂಪು ಸೆಟ್ಟುಗಳಿಗೆ ಪ್ರಥಮ ಆದ್ಯತೆಯ ಮೇಲೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ತನ್ನ ವೆಚ್ಚದಲ್ಲಿ ವಿದ್ಯುತ್ ಪೂರೈಸುತ್ತದೆ

2 ದಿನಾಂಕ 17-4-1997 ರಿಂದ 31-3-2001ರ ಅವಧಿಯೊಳಗೆ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಹಣ ಪಾವತಿಸಿದ್ದು ವಿದ್ಯುತ್ ಮಂಜೂರಾಗಿ, ಕಾರ್ಯಾದೇಶವಾಗಿರುವ ಎಲ್ಲಾ ನೀರಾವರಿ ಪಂಪುಸೆಟ್ಟುಗಳಿಗೆ ಎರಡನೆಯ ಆದ್ಯತೆಯ ಮೇಲೆ ವಿದ್ಯುತ್ ಪೂರೈಸಲಾಗುವುದು

3 ಕರ್ನಾಟಕ ಎಲೆಕ್ಟ್ರಿಸಿಟಿ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಕೋಡ್, ಕಂಡಿಕೆ 6.06ರಲ್ಲಿರುವಂತೆ ಕಪ್ಪು ಮತ್ತು ಬೂದು ತಾಲ್ಲೂಕುಗಳಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಕೋರಿ ಹೊಸದಾಗಿ ಅರ್ಜಿ ನ್ಯೂಂದಾಯಿಸುವ ಅರ್ಜಿದಾರರಿಂದ ಅದಕ್ಕೆ ತಗಲುವ ಸರ್ವಿಸ್ ಲೈನ್ ವೆಚ್ಚ ಕಟ್ಟಿಸಿಕೊಂಡು ಹಾಗೂ ನಿಗಮದ ಇತರೆ ನಿಯಮಗಳಂತೆ ವಾರ್ಷಿಕ ರೇವಣಿ, ಮೀಟರ್ ಸೆಕ್ಯೂರಿಟಿ ಡಿಪಾಜಿಟ್ ಇತ್ಯಾದಿ ಪಾವತಿಸಿಕೊಂಡು ಮೂರನೆಯ ಆದ್ಯತೆಯ ಮೇಲೆ ವಿದ್ಯುತ್ ಪೂರೈಸಲಾಗುವುದು

ಈ ರೀತಿ ನ್ಯೂಂದಾಯಿಸಿದ ಅರ್ಜಿಗಳ ಸಂಖ್ಯೆಗ ಅನುಗುಣವಾಗಿ ಪ್ರತಿ ತಾಲ್ಲೂಕಿಗೆ ಗುರಿಯನ್ನು ಗೊತ್ತುಪಡಿಸಲಾಗುವುದು ಅಲ್ಲದೇ ವಿದ್ಯುತ್ ಮಂಜೂರಾತಿ ಮಾಡುವ ವೇಳೆ ಜಾರಿ ಇರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನಿಯಮದಂತೆ ಪ್ರತಿ

ಅಶ್ವಶಕ್ತಿಗೆ ನಿಗಧಿ ಪಡಿಸಿರುವ ಆರ್ಥಿಕ ಮಿತಿಯನ್ನು ಪರಿಗಣಿಸಲಾಗುತ್ತದೆ

ಮೇಲೆ ತಿಳಿಸಿದ ಆದ್ಯತೆಯು ಬೆಳ್ತಂಗಡಿ ತಾಲ್ಲೂಕಿಗೂ ಸಹ ಅನ್ವಯವಾಗುತ್ತದೆ

ತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ದರಗಳ ಆದೇಶ 2002ರ ನೀರಾವರಿ ಪಂಪುಸೆಟ್ಟು ಪ್ರವರ್ಗದಲ್ಲಿ ನಿಗದಿಪಡಿಸಿರುವಂತೆ ವಿದ್ಯುಚ್ಛಕ್ತಿ ದರಗಳನ್ನು ಕವಿಪ್ರನಿನಿಯು ರೈತರ ಪಂಪುಸಟ್ಟಗಳಿಗೆ ವಿಧಿಸಿ ಬಿಲ್ ಮಾಡಲಾಗುತ್ತಿದೆ ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣ ಸಾಮಾನ್ಯ ಸಂಖ್ಯೆ 2907(ಎ) ಪ್ರಕಾರ ವಿದ್ಯುತ್ ಬಿಲ್ನ್ನು ಪಾವತಿಸದೆ ಇರುವ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಕಡಿತ ಮಾಡಲಾಗುವುದು ಈಗಾಗಲೇ ರೈತರ ವರಿಷ್ಠರಣಗ ಸಲ್ಲಿಸಿರುವ ಅರ್ಜಿಯಲ್ಲಿ ಅಡಿಕೆ ಮತ್ತು ತೆಂಗು ಎಲ್ ಟಿ(4) (ಡಿ)ಯಿಂದ ಎಲ್ ಟಿ 4(ಇ)ಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ನಿಗಮವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ದಾಖಲು ಮಾಡಿರುತ್ತದೆ

ಇ	ಸಮಯ	ವರ್ಗ 'ಅ' (ಶೇಕಡ 50ರಷ್ಟು ಗ್ರಾಮಾಂತರ ಫೀಡರ್‌ಗಳು)	ವರ್ಗ 'ಆ (ಉಳಿದ ಶೇಕಡ 50ರಷ್ಟು ಗ್ರಾಮಾಂತರ ಫೀಡರ್‌ಗಳು)
	ಬೆಳಿಗ್ಗೆ 6 00 ರಿಂದ ಮಧ್ಯಾಹ್ನ 12 00 ಗಂಟೆಯವರಗೆ	ಸರಬರಾಜು ಇರುವುದಿಲ್ಲ	ಮೂರು ಫೇಸ್ ಸರಬರಾಜು
	ಮಧ್ಯಾಹ್ನ 12 00 ರಿಂದ ಸಂಜೆ 6 00 ರವರೆಗೆ	ಮೂರು ಫೇಸ್ ಸರಬರಾಜು	ಸರಬರಾಜು ಇರುವುದಿಲ್ಲ
	ಸಂಜೆ 6 00 ರಿಂದ ಬೆಳಿಗ್ಗೆ 6 00ರವರೆಗೆ	ಒಂದು ಫೇಸ್ ಸರಬರಾಜು	ಒಂದು ಫೇಸ್ ಸರಬರಾಜು

ಇದರ ಅನ್ವಯ ಗ್ರಾಮಾಂತರ ಪ್ರದೇಶಗಳಲ್ಲಿನ ಕೃಷಿ ಪಂಪುಸೆಟ್ಟುಗಳಿಗೆ ದಿನವಹಿ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸಂಪರ್ಕ ಒದಗಿಸಲಾಗುತ್ತಿದೆ ವಿದ್ಯುತ್ ಉತ್ಪಾದನೆ ಪ್ರಮಾಣದಲ್ಲಿ ಸುಧಾರಣೆಗೊಂಡಲ್ಲಿ ಹೆಚ್ಚಿನ ಸಮಯ ವಿದ್ಯುತ್ ಸರಬರಾಜು ಮಾಡಲು ಕ್ರಮ ತೆಗದುಕೊಳ್ಳಲಾಗುವುದು